ಶ್ರೀ ಪಿ. ಆರ್. ರಾಮಯ್ಯ.—ತಾವು ಮಂತ್ರಿಗಳ ಪೀಠವನ್ನು ಅಲಂಕರಿಸಿದ ಮೇಲೆ, ಈ ಆಸ್ಪತ್ರೆಗೆ ಯಾವಾಗ ಭೇಟಿ ಕೊಟ್ಟಿದ್ದೀರಿ ?

Sri T. CHANNIAH.—Please repeat your question.

ಶ್ರೀ ಪಿ. ಆರ್. ರಾಮಯ್ಯ.—ತಾವು ಮಂತ್ರಿಗಳಾಗಿ ಅಧಿಕಾರವನ್ನು ಸ್ವೀಕರಿಸಿದ ಮೇಲೆ ಈ ಆಸ್ಪತ್ರೆಗೆ ಯಾವಾಗಲಾದರೂ ಭೇಟಿಯನ್ನು ಕೊಡೋಣ ವಾಗಿದೆಯೇ ?

ಶ್ರೀ ಟಿ. ಚೆನ್ನಯ್ಯ.—ಕೊಟ್ಟಿದ್ದೇನೆ.

ಶ್ರೀ ಪಿ. ಆರ್. ರಾಮಯ್ಯ.—ತಾವು ಹಾಗೆ ಭೇಟಿ ಕೊಟ್ಟಾಗ ಅಲ್ಲಿನ ಆಫೀಸರವರು ಆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಹಳಮಂದಿ ರೋಗಿಗಳು ಬರುತ್ತಿದ್ದಾರೆ, ಆದ್ದರಿಂದ ಅಲ್ಲಿ ಇನ್ನೂ ಹೆಚ್ಚು ಹಾಸಿಗೆಗಳು ಬೇಕು ಎಂದು ಅರಿಕೆ ಮಾಡಿಕೊಂಡಿದ್ದಾರೆಯೇ ?

ಶ್ರೀ ಟಿ. ಚೆನ್ನಯ್ಯ.—ಅರಿಕೆ ಮಾಡಿಕೊಂಡಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ಅವರು ಅರಿಕೆ ಮಾಡಿಕೊಂಡು ಎಷ್ಟು ದಿವಸಗಳಾಗಿವೆ ?

ಶ್ರೀ ಟಿ. ಚೆನ್ನಯ್ಯ.—ನಾನು ಭೇಟಿ ಕೊಟ್ಟಾಗ ಅವರು ಅರಿಕೆ ಮಾಡಿಕೊಂಡರು.

ಶ್ರೀ ಪಿ. ಆರ್. ರಾಮಯ್ಯ.—ಅರಿಕೆ ಮಾಡಿಕೊಂಡು 2 ತಿಂಗಳಾಯಿತೆ ? ಇಲ್ಲವೇ 3 ತಿಂಗಳಾಯಿತೆ ?

ಶ್ರೀ ಟಿ. ಚೆನ್ನಯ್ಯ.—ಸುಮಾರು 3 ತಿಂಗಳು ಆಗಿರಬಹುದೆಂದು ಕಾಣುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಈ ಆಸ್ಪತ್ರೆಗೆ ಬೋರ್ಡ್ ಆಫ್ ವಿಸಿಟರ್ಸ್ ಏನಾದರೂ ಇದ್ದಾರೆಯೇ ?

ಶ್ರೀ ಟಿ. ಚೆನ್ನಯ್ಯ.—ಇದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ಅವರು ಈ ವಿಷಯದಲ್ಲಿ ಏನಾದರೂ ಸಲಹೆಯನ್ನು ಕೊಟ್ಟಿದ್ದಾರೆಯೇ ?

ಶ್ರೀ ಟಿ. ಚೆನ್ನಯ್ಯ.—ಕೊಟ್ಟಿಲ್ಲ.

Mr. SPEAKER.—The Hon'ble Member has brought this point to the notice of the Government sufficiently well; they will consider it.

Lumpsum building tax paid by the Hindustan Aircraft Factory to the Hindustan Aircraft Sanitary Board.

Q.—289. **Sri A. V. NARASIMHA REDDY** (Bangalore South).—

Will the Government be pleased to state :—

(*a*) whether it is true that the Hindustan Aircraft Factory is paying Rs. 15,000 as a lumpsum building tax to the Hindustan Aircraft Sanitary Board ;

(*b*) the number of buildings that are put up there ;

(*c*) whether representation has been made to raise this lumpsum tax to Rs. 50,000 per annum ;

(*d*) the steps that have been taken by them in that behalf ?

A.—**Sri T. CHANNIAH** (Minister for Public Health and Local Self-Government).—

(*a*) No.

(*b*) Approximately about 800 buildings.

(*c*) No.

(*d*) Does not arise in view of the answer to clause (*c*).

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಸ್ಯಾನಿಟರಿ ಬೋರ್ಡಿನವರಿಗೆ, ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಕಾರ್ಖಾನೆಯು ಹಣ ಕೊಡುತ್ತಿದೆಯೇ ?

*ಶ್ರೀ ಟಿ. ಚೆನ್ನಯ್ಯ.—ಕಟ್ಟಡದ ಕಂದಾಯದ ರೂಪವಾಗಿ ಕೊಡುತ್ತಿಲ್ಲ. ಲಂಪ್‌ಸಂ ಕಂಟ್ರಿಬ್ಯೂಷ್ಷ್ ಆಗಿ ಕೊಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಯಾವ ಉದ್ದೇಶದಿಂದ ಈ ಲಂಪ್‌ಸಂ ಕಂಟ್ರಿಬ್ಯೂಷ್ಷ್ ಕೊಡುತ್ತಿದ್ದಾರೆ ?

ಶ್ರೀ ಟಿ. ಚೆನ್ನಯ್ಯ.—ಸ್ಯಾನಿಟರಿ ಬೋರ್ಡಿನ ಇಂಪ್ರೂವ್‌ಮೆಂಟಿಗೋಸ್ಕರ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕಟ್ಟಡದ ಕಂದಾಯದ ರೂಪವಾಗಿ ಅಲ್ಲದೆಹೋದರೆ ಇವರು ಹಣ ಕೊಡುವ ಪ್ರಮೇಯ ಏನಿದೆ ? ಕೊಡತಕ್ಕಂಥ ಹಣ ಕಟ್ಟಡದ ಕಂದಾಯದ ರೂಪವಾಗಿ ಕೊಡದಿದ್ದರೆ ಮತ್ತೆ ಇನ್ನಾವ ಕಾರಣದಿಂದ ಕೊಡುತ್ತಾರೆ ?

ಶ್ರೀ ಟಿ. ಚೆನ್ನಯ್ಯ.—ಸ್ಯಾನಿಟರಿ ಬೋರ್ಡಿನ ಇಂಪ್ರೂವ್‌ಮೆಂಟ್‌ಗೋಸ್ಕರ ಕೊಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸ್ಯಾನಿಟೆರಿ ಬೋರ್ಡಿಗೆ ರೆವೆನ್ಯೂಸ್ ಬರುವುದು ಸಾಮಾನ್ಯವಾಗಿ ಕಟ್ಟಡಗಳ ಮೇಲೆ ಸುಂಕಹಾಕುವುದರ ಮೂಲಕವಲ್ಲವೇ ?

ಶ್ರೀ ಟಿ. ಚೆನ್ನಯ್ಯ.—ಅಲ್ಲ ಸ್ವಾಮಿ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ ಸ್ಯಾನಿಟೆರಿ ಬೋರ್ಡಿಗೆ ರೆವೆನ್ಯು ಎಲ್ಲಿಂದ ಬರುವುದು ?

ಶ್ರೀ ಟಿ. ಚೆನ್ನಯ್ಯ.—ಅವರು ಇಷ್ಟು ಹಣ lumpsum contribution ಆಗಿ ಕೊಡುತ್ತಿದ್ದಾರೆ. ಅದು ಇಂಪ್ರೂವ್‌ಮೆಂಟಿಗೋಸ್ಕರ. ಕಟ್ಟಡದ ಮೇಲೆ ಸುಂಕದ ರೂಪದಲ್ಲಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಕಾರ್ಖಾನೆಗೆ ಸ್ಯಾನಿಟೆರಿ ಬೋರ್ಡು ಇದೆಯೇ ?

ಶ್ರೀ ಟಿ. ಚೆನ್ನಯ್ಯ.—ಹೌದು, ಹಿಂದೂಸ್ತಾನ್ ಏರ್‌ಕ್ರಾಫ್ಟ್ ಸ್ಯಾನಿಟೆರಿ ಬೋರ್ಡು ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಹಿಂದೂಸ್ತಾನ್ ಏರ್‌ಕ್ರಾಫ್ಟ್ ಸ್ಯಾನಿಟೆರಿ ಬೋರ್ಡಿಗೆ ಎಷ್ಟು ಹಳ್ಳಿಗಳು ಸೇರಿವೆ ?

ಶ್ರೀ ಟಿ. ಚನ್ನಯ್ಯ.—ಸುಮಾರು 25 ಗ್ರಾಮಗಳು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಹಳ್ಳಿಗಳಲ್ಲಿರುವ ಕಟ್ಟಡಗಳ ಮೇಲೆ ಮನೆಕಂದಾಯ ವಸೂಲು ಮಾಡುತ್ತಿದ್ದಾರೆಯೇ, ಇಲ್ಲವೆ ?

ಶ್ರೀ ಟಿ. ಚೆನ್ನಯ್ಯ.—ವಸೂಲು ಮಾಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಸ್ಯಾನಿಟೆರಿ ಬೋರ್ಡಿನವರು ಈ ಹಳ್ಳಿಗಳಿಂದ ಬಿಲ್ಡಿಂಗುಗಳ ಮೇಲೆ ಹಣ ವಸೂಲು ಮಾಡುತ್ತಿರುವಾಗ ಹಿಂದೂಸ್ತಾನ್ ಏರ್‌ಕ್ರಾಫ್ಟ್ ಕಾರ್ಖಾನೆಯಲ್ಲಿ 800 ಕಟ್ಟಡಗಳಿದ್ದರೂ ಅವುಗಳ ಮೇಲೆ ಬಿಲ್ಡಿಂಗ್ ಟ್ಯಾಕ್ಸ್ ಏತಕ್ಕೆ ಹಾಕಬಾರದು ?

ಶ್ರೀ ಟಿ. ಚೆನ್ನಯ್ಯ.—ಕಟ್ಟಡಗಳನ್ನು ಕಟ್ಟುವುದಕ್ಕೆ ಈಗ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 40,000 ರೂಪಾಯಿಗಳನ್ನು annual contribution ಆಗಿ ಕೊಡುತ್ತಿದ್ದಾರೆ.

ಶ್ರೀ ಎ. ಪಿ. ನರಸಿಂಹರೆಡ್ಡಿ.—800 ಕಟ್ಟಡಗಳನ್ನು ಅಸೆಸ್‌ಮಾಡಿ ಸುಂಕ ಹಾಕಿದರೆ ಒಂದು ಲಕ್ಷಕ್ಕೆ ಏರಿದ ಸುಂಕವನ್ನು ವಸೂಲು ಮಾಡಬಹುದು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri T. CHANNIAH.—That is under consideration.

Export of Timber from Chickmagalur.

Q.—479. **Sm. B. L. SUBBAMMA** (Chickmagalur-Mudigere).—

Will the Government be pleased to state :—

(*a*) the quantity of timber in cubic feet that is going out of the State for the past six years (details to be furnished);

(*b*) the quantity that has gone out from Chickmagalur ;

(*c*) whether the Government will check the same ?

A.—**Sri T. CHANNIAH** (Minister for Public Health and Local Self-Government).—

(*a*) and (*b*) These particulars are not prepared for our departmental purposes and ready figures are not therefore available. The compilation will take some time.

(*c*) There appears to be no necessity for checking export of timber. Unless proper reasons are given for banning exports and imposing trade restrictions, no checks can be introduced by this Government especially as now Mysore is part of Indian Republic and the other States may resent such restrictions.

Moreover Madras and Coorg States have large timber depots located within the Mysore State. In these depots, periodical auction sales are held and timber is sold to both local and outside merchants. Any kind of restriction imposed may seriously affect these sales and possibly influence them to change their present depot sites.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.— 'c' ಭಾಗದ ಪ್ರಶ್ನೆಗೆ ಉತ್ತರವಾಗಿ ಚೌಬೀನೆ ಹೊರಗೆ ಹೋಗುವುದನ್ನು ತಡೆಗಟ್ಟುವ ಅವಶ್ಯಕತೆ ಏನೂ ಕಂಡುಬಂದಿಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಈ ಚೌಬೀನೆಯ ಸಾಗಾಣಿಕೆಗೆ ಅಡ್ಡಿ ಆತಂಕಗಳು ಇಲ್ಲವೆ ?

* ಶ್ರೀ ಟಿ. ಚೆನ್ನಯ್ಯ.—ಹೊರಗಡೆ ಹೋಗುವುದಕ್ಕೂ ಒಳಗಡೆ ಬರುವುದಕ್ಕೂ ಅಡ್ಡಿ ಆತಂಕಗಳು ಏನೂ ಇಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕಾಗಿನದ ಮುಖಾಂತರ ಯಾವ ಅಡ್ಡಿ ಆತಂಕ ಇಲ್ಲದೆ ಮರಗಳನ್ನು ಹೊರಗೆ ಸಾಗಿಸುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ಮರಗಳನ್ನು ಹೊರಕ್ಕೆ ಸಾಗಿಸಕೂಡದು ಎಂದು ಯಾವ ನಿರ್ಬಂಧವನ್ನೂ ಹಾಕಿಲ್ಲ. ಅಲ್ಲಿ ಚೌಬೀನೆಯನ್ನು ಹೊರಗಡೆ ತೆಗೆದುಕೊಂಡು ಹೋಗಿ ಮಾರುವುದಕ್ಕೆ ಡಿಪೋಗಳನ್ನು ಏರ್ಪಡಿಸಿದ್ದೇವೆ Mysore is included in the Indian Republic ; therefore there would be no restrictions on movements of timber.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕೌಂಟರ್‌ಫೀಟ್ ಟಿ. ಪಿ. ಯನ್ನು ಹಾಕಿ ಮರಗಳನ್ನು ಹೊರಗೆ ಸಾಗಿಸುತ್ತಿದ್ದಾರೆ. ಹೀಗೆ ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀಮತಿ ಬಿ ಎಲ್. ಸುಬ್ಬಮ್ಮ —ಜಮೀನು ದರ ಖಾಸ್ತು ತೆಗೆದುಕೊಂಡು ಅಲ್ಲಿದ್ದ ಮರಗಳನ್ನು ಕಡಿದು ಸಾಗಿಸಿ ಭೂಮಿಯು ಪಾಳು ಬೀಳುತ್ತಿರುವುದು ತಮಗೆ ಗೊತ್ತಿಲ್ಲವೇ ?

ಶ್ರೀ ಟಿ. ಚನ್ನಯ್ಯ —ಗೊತ್ತಿಲ್ಲ. ಗಮನಕ್ಕೆ ಬಂದರೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ವಿಚಾರದಲ್ಲಿ ತಮ್ಮ ಗಮನಕ್ಕೆ ಏನೂ ಬಂದಿಲ್ಲವೇ ?

ಶ್ರೀ ಕೆ, ಹನುಮಂತಯ್ಯ (ಮುಖ್ಯಮಂತ್ರಿಗಳು).—ಡಿಪಾರ್ಟ್‌ಮೆಂಟಲ್ ಆಫೀಸರುಗಳು ವಿಚಾರಣೆ ಮಾಡುತ್ತಾ ಇರಬಹುದು. ಸರ್ಕಾರಕ್ಕೆ ಇನ್ನೂ ರಿಪೋರ್ಟ್ ಬಂದಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ —ಈ ವಿಷಯದಲ್ಲಿ ಹೆಚ್ಚಿಗೆ ನಿಗಾ ತೆಗೆದುಕೊಳ್ಳುವುದು ಒಳ್ಳೆಯದು ಅಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಹೌದು

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಕಳ್ಳ ನಾಟ ಸಾಗಿಸಿಕೊಂಡು ಹೋದ ಎಷ್ಟು ಕೇಸುಗಳನ್ನು ಹಾಕಿದ್ದಾರೆ.

Mr. SPEAKER.—It is too general a question.

Government and private Irrigation Works in Nagamangala Taluk.

Q.—76. **Sri M. SHANKAR LINGE GOWDA** (Nagamangala).—

Will the Government be pleased to state :—

(*a*) the names of Government irrigation works and private irrigation works costing below Rs. 5,000 in Nagamangala Taluk hobliwar and villagewar) ;

(*b*) (1) the estimates of which have been sanctioned ;